

# ಅಹಂಕಾರದ ಫಲ

■ ಗೀತಾ ಎಸ್. ಭಟ್, ಶಿರಾಲಿ

ಅದೊಂದು ಚಂಪಕವನ. ಅಲ್ಲಿ ಎಲ್ಲಾ ಬಗೆಯ ಪ್ರಾಣಿ ಪಕ್ಷಿಗಳೂ ತುಂಬಾ ಅನ್ಯೋನ್ಯವಾಗಿದ್ದವು. ಆ ಚಂಪಕವನದಲ್ಲೊಂದು ಬೃಹತ್ತಾಕಾರದ ಅರಳಿಮರ. ಆ ಮರದ ಕೆಳಗೆ ಸುಂದರ ಸರೋವರವಿತ್ತು. ಆ ಅರಳಿಮರದಲ್ಲಿ ಸುಂದರವಾದ ಪಂಚರಂಗಿ ಗಿಳಿ ವಾಸವಾಗಿತ್ತು. ಆ ಗಿಳಿಗೆ ಅದೇ ಮರದ ಮೇಲಿರುವ ಇರುವೆ, ಅಲ್ಲೇ ವಾಸಿಸುತ್ತಿದ್ದ ಮರಕುಟಿಕ ಹಕ್ಕಿ, ಒಂದು ನೊಣ ಹಾಗೂ ಸರೋವರದಲ್ಲಿರುವ ಕಪ್ಪೆಯ ಸಂಗಡ ಗೆಳೆತನ ಬೆಳೆದಿತ್ತು. ಆ ಸುಂದರಿ ಪಂಚರಂಗಿ ಕೆಲ ದಿನದ ಹಿಂದಷ್ಟೇ ಗೂಡುಕಟ್ಟಿ ಮೊಟ್ಟೆಗಳನ್ನಿಟ್ಟಿತ್ತು.

ಆ ಸಮಯದಲ್ಲಿ ಚಂಪಕವನಕ್ಕೆ ಎಲ್ಲಿಂದಲೋ ಗಜೇಂದ್ರನೆಂಬ ಆನೆ ವಲಸೆ ಬಂತು. ಮೊದಮೊದಲು ಎಲ್ಲರೊಂದಿಗೂ ಬೆರೆಯುತ್ತಿದ್ದ ಗಜೇಂದ್ರ ನಂತರ ದರ್ಪದಿಂದ ಮೆರೆಯತೊಡಗಿತು. ತನ್ನ ಸೊಂಡಿಲನ್ನು ಬಳಸಿ ಬಲಪ್ರಯೋಗ ಮಾಡಿ ಎಲ್ಲಾ ಮರಗಿಡಗಳನ್ನೂ ಉರುಳಿಸಲಾರಂಭಿಸಿತು. ಅದರ ಉಪಟಳಕ್ಕೆ ಇಡೀ ಕಾಡಿನ ಪ್ರಾಣಿ ಪಕ್ಷಿಗಳೆಲ್ಲ ಭಯಭೀತರಾದರು.

ಹೀಗೇ ತನ್ನನ್ನು ಎದುರಿಸುವವರು ಯಾರೂ ಈ ಚಂಪಕವನದಲ್ಲಿಲ್ಲವೆಂದು ಅಹಂಕಾರದಿ ಮೆರೆಯುತ್ತಿದ್ದ ಗಜೇಂದ್ರ ತನ್ನ ಸೊಂಡಿಲನ್ನು ಮೇಲೆ ಮಾಡಿ ಸಿಕ್ಕ ಸಿಕ್ಕ ಮರಗಳನ್ನು, ಹಕ್ಕಿಗಳು ವಾಸಿಸುತ್ತಿದ್ದ ಮರದ ಟೊಂಗೆಗಳನ್ನು ಮುರಿದು ಹಾಕುತ್ತಾ ಗಿಳಿ ವಾಸಿಸುತ್ತಿದ್ದ ಅರಳಿಮರದ ಬಳಿ ಬಂದಿತು.

ಗಿಳಿ ಆಗತಾನೇ ಮೊಟ್ಟೆಯೊಡೆದು ಹೊರಬಂದ ತನ್ನ ಪುಟ್ಟ ಪುಟ್ಟ ಮರಿಗಳಿಗೆ ಅರಳಿಮರದ ಅರಳಿ ಹಣ್ಣುಗಳನ್ನೇ ಕಿತ್ತು ಗುಟುಕು ನೀಡುತ್ತಿತ್ತು. ಗಜೇಂದ್ರನ ಹಾವಳಿ ನೋಡಿ ಭಯಗೊಂಡ ಗಿಳಿ 'ದಮ್ಮಯ್ಯ ಗಜೇಂದ್ರ ನನ್ನ ಗೂಡಿಗೆ ತೊಂದರೆ ಮಾಡಬೇಡ. ನಿನ್ನೆ ತಾನೇ ಜನಿಸಿದ ಪುಟ್ಟ ಕಂದಮ್ಮಗಳಿವೆ. ಅವಕ್ಕೇನೂ ಮಾಡಬೇಡ' ಎಂದು ಗೋಗರೆಯಿತು.

ಅಹಂಕಾರದ ಪೊರೆ ಕವಿದು ಮಂಕಾಗಿದ್ದ ಗಜೇಂದ್ರ ಯಾರ ಮಾತನ್ನೂ ಕೇಳುವ ಸ್ಥಿತಿಯಲ್ಲಿರಲಿಲ್ಲ. ಅತ್ತರೂ, ಗೋಗರೆದರೂ, ಕೇಳದ ಗಜೇಂದ್ರ ತನ್ನ ಸೊಂಡಿಲಿಂದ ಗಿಳಿಯ ಗೂಡನ್ನು ಕಿತ್ತು ನೆಲಕ್ಕಪ್ಪಳಿಸಿತು. ಮರದ ಕೆಲ ಟೊಂಗೆಗಳನ್ನೂ ಮುರಿದೆಸೆದ. ನೆಲಕ್ಕೆ ಬಿದ್ದಿದ್ದ ಗಿಳಿಯ ನಾಲ್ಕು ಮರಿಗಳನ್ನು ತನ್ನ ಕಾಲಿಂದ ಹೊಸಕಿಹಾಕಿ ದರ್ಪದಿ ಘೀಳಿಡತೊಡಗಿತು. ಅಳುತ್ತಿದ್ದ ಪಂಚರಂಗಿ ಗಿಳಿ ತನ್ನ ಗೆಳೆಯರ ಬಳಿ ತನಗಾದ ಅನ್ಯಾಯ ಮತ್ತು ಅಸಹಾಯಕತೆಯನ್ನು ಹೇಳಿ ಅಳತೊಡಗಿತು. ಗೆಳೆಯರೆಲ್ಲರೂ 'ಹೇಗಾದರೂ ಮಾಡಿ ನಾವೆಲ್ಲರೂ ಸೇರಿ ಗಜೇಂದ್ರನಿಗೆ ತಕ್ಕ ಪಾಠ ಕಲಿಸುತ್ತೇವೆ' ಎಂದು ಸಮಾಧಾನ ಮಾಡಿದವು. ಏನೇನು ಮಾಡಬೇಕೆಂದು ಗುಟ್ಟಾಗಿ ಚರ್ಚಿಸಿದವು.

ಒಂದುದಿನ ಆನೆ ಮಲಗಿರುವಾಗ ಗಿಳಿ ತನ್ನ ಗೆಳೆಯರ ಬಳಗದೊಂದಿಗೆ ಅಲ್ಲಿ ಬಂದಿತ್ತು. ಇರುವೆಯು ತನ್ನ ಪರಿವಾರವನ್ನೂ ಕರೆತಂದಿತ್ತು. ನಿಶಬ್ದವಾಗಿ ಎಂಟತ್ತು ಇರುವೆಗಳು ಗಜೇಂದ್ರನ ಸೊಂಡಿಲೊಳಗೆ ಹೊಕ್ಕು ಜೋರಾಗಿ ಕಚ್ಚತೊಡಗಿದವು. ಏನಾಯಿತೆಂದು ಸೊಂಡಿಲು ಅಲುಗಾಡಿಸುವಷ್ಟರಲ್ಲಿ ಮರಕುಟಿಕ ಹಕ್ಕಿಯು ಬಂದು ಆನೆಯ ಎರಡೂ ಕಣ್ಣುಗಳನ್ನು ಕುಕ್ಕಿತು. ಕಣ್ಣು ಗಾಯವಾಗಿ ರಕ್ತ ಸೋರತೊಡಗಿತು. ನೋವಿಗೆ ಆನೆ ಘೀಳಿಡತೊಡಗಿತು. ತಕ್ಷಣ ನೊಣ ಬಂದು ಎರಡೂ ಗಾಯಗಳ ಮೇಲೆ ಕುಳಿತು ರಕ್ತ ಹೀರತೊಡಗಿತು. ಕಣ್ಣುಕಾಣಿಸದ ಗಜೇಂದ್ರನಿಗೆ ತನ್ನ ಆಹಾರ ಹುಡುಕುವುದು ಕಷ್ಟವಾಯಿತು. ಹಸಿವಿಂದ ಗಾಯ ಕೊಳೆತು ಕೀವಾಗಿ ಆನೆಯ ಎರಡೂ ಕಣ್ಣುಗಳ ಜಾಗದಲ್ಲಿ ದೊಡ್ಡ ಕುಳಿಗಳೇರ್ಪಟ್ಟು ಹುಳುಗಳು ಮಿಜಿಗುಡತೊಡಗಿದವು. ಅಸಾಧ್ಯ ನೋವಿಂದ ಆನೆ ಒದ್ದಾಡತೊಡಗಿತು. ಒಂದು ವಾರದಿಂದ ಹಸಿವು ಬಾಯಾರಿಕೆಯಿಂದಿದ್ದ ಆನೆಗೆ ಎದ್ದೇಳಲೂ ನಿತ್ರಾಣವಾಗಿತ್ತು.

ಅಷ್ಟರಲ್ಲಿ ಗಿಳಿಯ ಸ್ನೇಹಿತ ಕಪ್ಪೆ ದೂರದಲ್ಲಿ ದೊಡ್ಡ ಪ್ರಪಾತದ ಪಕ್ಕದಲ್ಲಿ ಕುಳಿತು ಕೂಗತೊಡಗಿತು. ಕಪ್ಪೆ ಕೂಗುವ ಶಬ್ದಕೇಳಿದ ಗಜೇಂದ್ರ ಅತ್ತ ನೀರು ಸಿಗಬಹುದೆಂದುಕೊಂಡು ಹೊರಟಿತು. ಮಾರ್ಗಮಧ್ಯ ಅಂಧನಾದ ಗಜೇಂದ್ರನ ಕಾಲುಗಳಿಗೆ ಮರಗಿಡಬಳ್ಳಿಗಳು ಸಿಕ್ಕಿ ಮುಗ್ಗರಿಸಿತು. ಆದರೂ ಮುಂದೆ ಮುಂದೆ ಹೋದ ಗಜೇಂದ್ರ ತನ್ನ ಮುಂದೆ ಯಮನಿದ್ದಾನೆಂದು ತಿಳಿಯದೇ ಆಳವಾದ ಪ್ರಪಾತದಿ ಕಾಲಿಟ್ಟು ಮೇಲಿಂದ ಕೆಳಗೆ ಬಿದ್ದು ಅಸುನೀಗಿತು. ಹೀಗೆ ಚಂಪಕವನದ ತುಂಬಾ ಅಟ್ಟಹಾಸದಿಂದ ಮೆರೆಯುತ್ತಿದ್ದ ಗಜೇಂದ್ರನೆಂಬ ಆನೆ ಘೋರ ಅಂತ್ಯವನ್ನು ಕಂಡಿತು.

ಪಂಚರಂಗಿ ಗಿಳಿ ತನ್ನ ಸ್ನೇಹಿತರಿಗೆ ಧನ್ಯವಾದಗಳನ್ನು ತಿಳಿಸಿತು. ದುರಹಂಕಾರಿ ಆನೆಯ ಅಂತ್ಯದಿಂದ ಚಂಪಕವನದ ಎಲ್ಲಾ ಪ್ರಾಣಿಪಕ್ಷಿಗಳೂ ಸಂತೋಷಪಟ್ಟವು. ಮುಂದೆ ಎಲ್ಲರೂ ನಿರ್ಭಯದಿಂದ ಓಡಾಡುತ್ತಾ ಸಂತೋಷವಾಗಿ ಬಾಳತೊಡಗಿದವು.

(ನೀತಿ: ಅಹಂಕಾರದಿಂದ ಮೆರೆದು ಅನ್ಯರಿಗೆ ಉಪಟಳ ಕೊಡಬಾರದು. ಅಹಂಕಾರದಿಂದ ನಮ್ಮ ಅಧಃಪತನ ನಿಶ್ಚಿತ. ನಿಗರ್ವಿಗಳಾಗಿ ಎಲ್ಲರೊಂದಿಗೂ ಬೆರೆತು ಬಾಳಬೇಕು.) ■